# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 724(783) |
| ಮಾನ್ಯ ಸದಸ್ಯರ ಹೆಸರು | : ಡಾ|| ಯತೀಂದ್ರ ಎಸ್., (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 23.07.2024 |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನೂತನ ಎ.ಪಿ.ಎಂ.ಸಿ ಕಾಯ್ದೆಯಿಂದ ಎ.ಪಿ.ಎಂ.ಸಿಗಳಿಗೆ ಆದಾಯ ಹೆಚ್ಚಿದೆಯೇ; ಹೆಚ್ಚಿದಲ್ಲಿ ಮಾಹಿತಿ ನೀಡುವುದು' | ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ಅಧಿನಿಯಮ 2023 ರಲ್ಲಿ ಕಾಯ್ದೆ ಕಲಂ 8(1), 8(2), 8(3) (ಸೇರ್ಪಡೆ) ಹಾಗೂ ಕಲಂ 117ಕ್ಕೆ ತಿದ್ದುಪಡಿ ಮಾಡಿ ರಾಜ್ಯಪತ್ರದಲ್ಲಿ ದಿನಾಂಕ:07/03/2024 ರಂದು ಪ್ರಕಟಿಸಲಾಗಿರುತ್ತದೆ. ಸದರಿ ಕಾಯ್ದೆ ಜಾರಿಗೆ ಸಂಬಂಧಿಸಿದಂತೆ ವಿವಿಧ ವರ್ತಕರ ಸಂಘಗಳು ಸಲ್ಲಿಸಿದ ಮನವಿಗಳಿಗೆ ಸ್ಪಷ್ಟೀಕರಣ ಹಾಗೂ ಮಾರ್ಗಸೂಚಿಗಳನ್ನು ನೀಡಲಾಗಿದೆ. ಅದರಂತೆ, ಕಳೆದ ವರ್ಷ ಏಪ್ರಿಲ್ ಮಾಹೆಯಿಂದ ಜೂನ್ ಮಾಹೆಗೆ ಹೋಲಿಸಿದಲ್ಲಿ, ಪ್ರಸಕ್ತ ಸಾಲಿನಲ್ಲಿ ಆದಾಯ ಹೆಚ್ಚಿರುತ್ತದೆ.<br><br>2023-24ನೇ ಸಾಲಿನ ಏಪ್ರಿಲ್ ರಿಂದ ಜೂನ್ ತಿಂಗಳಿನಲ್ಲಿ ಒಟ್ಟು ರೂ.47.03 ಲಕ್ಷಗಳ ಮಾರುಕಟ್ಟೆ ಶುಲ್ಕ ಆದಾಯ ಇದ್ದು, ಪ್ರಸಕ್ತ ಸಾಲಿನಲ್ಲಿ ರೂ.81.84 ಲಕ್ಷ ಆದಾಯ ಬಂದಿರುತ್ತದೆ.<br><br>ಪ್ರಸ್ತುತ ಸಾಲಿನಲ್ಲಿ ಸಮಿತಿಗಳ ಪ್ರಾಂಗಣಗಳಲ್ಲಿ ವ್ಯಾಪಾರ ವಹಿವಾಟು ನಡೆಯುವುದರಿಂದ ಸಮಿತಿಗಳ ಆದಾಯ ಹೆಚ್ಚಳ ನಿರೀಕ್ಷೆ ಇದೆ. ಕಳೆದ ಸಾಲಿನಲ್ಲಿ ರೂ.217.00 ಕೋಟಿ ಮಾರುಕಟ್ಟೆ ಶುಲ್ಕ ಆದಾಯ ಬಂದಿದ್ದು, ಪ್ರಸ್ತುತ ಸಾಲಿಗೆ ರೂ.480.40 ಕೋಟಿ ಮಾರುಕಟ್ಟೆ ಶುಲ್ಕ ಆಕರಿಸುವ ಗುರಿಯನ್ನು ಹೊಂದಲಾಗಿದೆ. ಸದರಿ ಗುರಿಯನ್ನು ಸಾಧಿಸಲು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸೂಚನೆಗಳನ್ನು ನೀಡಲಾಗಿದೆ. |
| ಆ) | ಈ ನೂತನ ಕಾಯ್ದೆಯಿಂದ ಆದಾಯ ಕಡಿಮೆಯಾಗಿದ್ದಲ್ಲಿ ಈ ನಷ್ಟವನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಕಾಯ್ದೆ ತಿದ್ದುಪಡಿ ನಂತರದಲ್ಲಿ ಮಾರುಕಟ್ಟೆ ಪ್ರಾಂಗಣಗಳ ಜೊತೆಗೆ ಪ್ರಾಂಗಣಗಳ ಹೊರಗಿನ ವಹಿವಾಟು ನಿಯಂತ್ರಿಸಲು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಅಧಿಕಾರ ನೀಡಿದ್ದು, ಪ್ರಮುಖವಾಗಿ ಭತ್ತ, ಮೆಕ್ಕೆಜೋಳ ಉತ್ಪನ್ನಗಳ ಮೇಲೆ ನಿಯಂತ್ರಣ ಸಾಧ್ಯವಾಗುವುದರಿಂದ ನಿರೀಕ್ಷಿತ ಆದಾಯವನ್ನು ಸಾಧಿಸಲು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕ್ರಮ ವಹಿಸುತ್ತವೆ. |

| | | |
|---|---|---|
| ಈ) | ಎ.ಪಿ.ಎಂ.ಸಿಗಳನ್ನು ಮತ್ತಷ್ಟು ಸುಧಾರಣೆಗೊಳಿಸಲು ನೂತನ ಕಾಯ್ದೆಗೆ ತಿದ್ದುಪಡಿಯ ಅವಶ್ಯಕತೆ ಯಿದ್ದು, ಆ ರೀತಿಯ ತಿದ್ದುಪಡಿಯ ಪ್ರಸ್ತಾವ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು) | ಉಗ್ರಾಣ ಆಧಾರಿತ ಮಾರಾಟ ಚಟುವಟಿಕೆ, ಶೀತಲ ಗೃಹ, ಸೈಲೋಸ್, ಸಂಸ್ಕರಣ ಘಟಕಗಳು ಇವುಗಳನ್ನು ಉಪ ಮಾರುಕಟ್ಟೆ ಪ್ರಾಂಗಣಗಳೆಂದು ಘೋಷಿಸುವುದು, ಚಿಲ್ಲರೆ ಮಾರಾಟ ಮತ್ತು ಇ-ಕಾಮರ್ಸ್ ಪ್ಲಾಟ್‌ಫಾರಂ ಸ್ಥಾಪನೆ ಹಾಗೂ ಕಾರ್ಯನಿರ್ವಹಣೆ ಮುಂತಾದ ಅಂಶಗಳನ್ನು ಕಾಯ್ದೆಗೆ ಸೇರಿಸುವ ಸಂಬಂಧದ ತಿದ್ದುಪಡಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |

ಸಂಖ್ಯೆ: ಸಿಐ 211 ಎಂಆರ್‌ಇ 2024

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು
ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು